International Journal of Kannada Research
www.kannadajournal.com

ISSN: 2454–5813
IJKR 2017; 3(4): 155-159
© 2017 IJKR
www.kannadajournal.com
Received: 25-08-2017
Accepted: 26-09-2017

**ಮುನಿರಾಜು ಎಸ್.ವಿ**
ಸಂಶೋಧನ ವಿದ್ಯಾರ್ಥಿ, ಕನ್ನಡ ಭಾಷೆ ಮತ್ತು ಭಾಷಾಂತರ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಶ್ರೀನಿವಾಸವನಂ, ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ.

**Correspondence**
**ಮುನಿರಾಜು ಎಸ್.ವಿ**
ಸಂಶೋಧನ ವಿದ್ಯಾರ್ಥಿ, ಕನ್ನಡ ಭಾಷೆ ಮತ್ತು ಭಾಷಾಂತರ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಶ್ರೀನಿವಾಸವನಂ, ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ.

# ಸಾ.ಶಿ.ಮರುಳಯ್ಯನವರ ಸಾಹಿತ್ಯ(ಕಾವ್ಯ)ದಲ್ಲಿ ವೈಚಾರಿಕ ಚಿಂತನ

**ಮುನಿರಾಜು ಎಸ್.ವಿ**

ಕನ್ನಡ ಸಾಹಿತ್ಯ ಲೋಕದಲ್ಲಿ ಪ್ರಸಿದ್ಧರಾಗಿರುವ ಮರುಳಯ್ಯನವರು ವೃತ್ತಿಯಲ್ಲಿ ಶಿಕ್ಷಕರು ಕಥೆ, ಕವನ, ನಾಟಕಗಳು ಸೇರಿದಂತೆ ಸುಮಾರು ಎಂಬತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ತಮ್ಮ ಸಾಹಿತ್ಯ ಕೃಷಿಯಲ್ಲಿ ಪ್ರಕೃತಿಯ ಪ್ರೀತಿ, ಸಮಾಜಪರ ಕಾಳಜಿ, ಜನಜೀವನ, ಕುಟುಂಬ ಹಾಗೂ ಪ್ರಸ್ತುತತೆ, ವಿಚಾರಪರ ಚಿಂತನೆಗಳಿಗೆ ಪ್ರಾಮುಖ್ಯತೆ ನೀಡಿದ್ದಾರೆ. ಇವರನ್ನು ಹರಸಿ ಹಲವಾರು ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಹಾಗಾಗಿ ಅನೇಕರು ಇವರನ್ನು "ಕೃತಿ ವಿಭೂತಿ ಪುರುಷ" ಎಂದೇ ಕರೆಯುತ್ತಾರೆ.

"ಸಾ.ಶಿ ಮರುಳಯ್ಯನವರ ಕಾವ್ಯದಲ್ಲಿ ಆಧ್ಯಾತ್ಮಿಕತೆ ಮತ್ತು ಜೀವನೋತ್ಸಾಹಗಳೆರಡೂ ಸಮ್ಮಿಳಿತವಾಗಿ ಒಂದು ವಿಶಿಷ್ಟವಾದ ಜೀವನ ತತ್ವವೇ ರೂಪಗೊಂಡಿದೆ. ಅವರ ವ್ಯಾಪಕವಾದ ಭಾವಗಳು ಸುಂದರವಾದ ಶಬ್ಧಗಳಲ್ಲಿ ಮೈವೆತ್ತು ಮನಸ್ಸನ್ನು ಕುಣಿಸುತ್ತವೆ, ತಣಿಸುತ್ತವೆ. ಸಾಮಾನ್ಯವಾಗಿ ಲಯಬದ್ಧವಾಗಿಯೇ ಓಡುವ ಅವರ ಕಾವ್ಯ ಗೇಯತ್ವವನ್ನು ಮೈಗೂಡಿಸಿಕೊಂಡೇ ಹೋಗುತ್ತಾ ಮನಸ್ಸನ್ನು ಚಿಂತನಕ್ಕೆ ಹಚ್ಚುತ್ತದೆ."[೧] ಎಂದು ಪಿ.ಎಸ್ ರಾಮಾನುಜಂ ಹೇಳಿದ್ದಾರೆ.

ಸಮಾಜವನ್ನು ಪುನರುಜ್ಜೀವನಗೊಳಿಸುವಲ್ಲಿ ಮತ್ತು ಪರಿಶುದ್ಧಗೊಳಿಸುವಲ್ಲಿ ವಿಚಾರವಾದಗಳ ಪಾತ್ರ ಬಹಳ ಮುಖ್ಯವಾದದ್ದು. ಆದರೆ, ಈ ದಿಕ್ಕಿನಲ್ಲಿ ಕೈಗೊಳ್ಳಬೇಕಾದ ಕಾರ್ಯವು ಬಹಳ ಕಷ್ಟವಾದದ್ದು ಅಸೂಯೆಗಳನ್ನು ಮೀರಿದ್ದು ಎಂದಿದ್ದಾರೆ. ವೈಚಾರಿಕರು ಕಷ್ಟವನ್ನು ಪಡಬೇಕು ಇತ್ತ ಅದರಿಂದ ಒದಗುವ ಅಸೂಯೆಯನ್ನು ಮೀರಬೇಕು. ವಿಚಾರಿಯಾದವರಿಗೆ ಎಂದು ಯಾವ ಕಷ್ಟಗಳೇ ತಟ್ಟುವುದಿಲ್ಲ. ಹೀಗೆ ಸಾಹಿತ್ಯ ಮತ್ತು ವೈಚಾರಿಕತೆಗಳು ಬದುಕಿನ ಬುದ್ಧಿ–ಭಾವ–ಪ್ರಜ್ಞೆಯ ಸಮ್ಮಿಳಿತ, ಈ ವೈಚಾರಿಕತೆ ಹೊಂದಿರುವ ಕನ್ನಡ ಸಾಹಿತ್ಯ ಜೀವಪರವಾಗಿ ಜೊತೆಯಲ್ಲೇ ಬದುಕುತ್ತಾ ಬಂದಿದೆ. ಇನ್ನು ಶುದ್ಧ ವೈಚಾರಿಕ ಸಾಹಿತ್ಯವೂ ಪಟ್ಟಭದ್ರರ ಹುಟ್ಟಿಸುತ್ತಾ ನಿವೇದನೆ ಪ್ರತಿ ಬೋಧನೆ ವಿಜ್ಞಾನ ಮತ್ತು ಇಂದಿನ ಅನುಭವ ತತ್ವ ಮತ್ತು ಆಚರಣೆ ಇವುಗಳ ನಡುವೆ ಸೇತುವೆ ಕಟ್ಟುವ ಜನಪರ ಧರ್ಮವಾಗಿದೆ. ಅರಿವಿನ ಬೇರಿಂದ ಪ್ರಶ್ನೆಗಳ ಸಂಘರ್ಷದಲ್ಲಿ ಸಂದೇಹಗಳ ತಾಕಲಾಟದಲ್ಲಿ ಹೊಸ ವಿಚಾರ ಜನ್ಮ ತಾಳುತ್ತದೆ ಇಂತಹ ವಿಚಾರಗಳ ವಿಶ್ಲೇಷಣೆಯೇ ವೈಚಾರಿಕತೆ.

ಅಂದಂದಿನ ಸಮಾಜ ವ್ಯವಸ್ಥೆಯಲ್ಲಿನ ಮೌಲ್ಯಗಳನ್ನು ಪ್ರಶ್ನಿಸುವುದರ ಮುಖಾಂತರ ಸಂದೇಹ ಪಡುವುದರೊಂದಿಗೆ ಒಬ್ಬ ವಿಚಾರವಾದಿ ಹೊಸ ಮೌಲ್ಯಗಳ ಸೃಷ್ಟಿಗೆ ಕಾರಣನಾಗುತ್ತಾನೆ. ಆಗ ಈ ಮೌಲ್ಯಗಳ ನಡುವೆ ನಡೆವ ಸಂಘರ್ಷ, ಬದುಕು ಬದುಕುಗಳ ನಡುವೆ ನಡೆಯುವ ಸಂಘರ್ಷವಾಗಿ ಹೊಸ ಬದುಕಿನ ಹುಟ್ಟಿಗೆ ನಾಂದಿ ಹಾಡುತ್ತದೆ. ವಾಸ್ತವತೆಯ ಹಿನ್ನಲೆಯಲ್ಲಿ ಜನಪರವಾಗಿ ಆಲೋಚಿಸುವುದೇ ನಿಜವಾದ ವೈಚಾರಿಕ ವಸ್ತುನಿಷ್ಟವಾದ ಆಧಾರಗಳ ನಡುವೆ ವೈಚಾರಿಕತೆ ಹುಟ್ಟುತ್ತದೆ. ಇಂತಹ ವೈಚಾರಿಕತೆ ಅಂದಂದಿನ ಸಮಾಜದ ಜನ ಸಮುದಾಯದ ಆರೋಗ್ಯಕರವಾದ ಬೆಳವಣಿಗೆಗೆ ಸಹಾಯಕವಾಗುತ್ತದೆ ಇದಕ್ಕೆ ವಿಚಾರ ಕ್ರಾಂತಿ ಎಂದು ಕರೆಯಬಹುದು. ನಿಜವಾದ ಕ್ರಾಂತಿ ವೈಚಾರಿಕ ನೆಲೆಯನ್ನೊಳಗೊಂಡ ಸ್ಥಗಿತಗೊಂಡ ಸಮಾಜದ ಅಮೂಲಾಗ್ರ ಬದಲಾವಣೆಗೆ ಮೊಟ್ಟ ಮೊದಲನೆಯ ಅನಿವಾರ್ಯತೆ ಎಂದರೆ ವೈಚಾರಿಕತೆ ಮನುಷ್ಯನ ವಿಚಾರಗಳನ್ನು ಬೆಳೆಸದೆ ಆತನ ಶೋಷಿತ ಬದುಕನ್ನು ಬದಲಿಸಕ್ಕಾಗುವುದಿಲ್ಲ ಆದ್ದರಿಂದ ನಿಜವಾದ ಕ್ರಾಂತಿ ಪ್ರಾರಂಭವನ್ನು ವೈಚಾರಿಕತೆ ಮಾಡುತ್ತದೆ.

ಕುವೆಂಪುರವರು ಹೇಳುವಂತೆ "ವಿಜ್ಞಾನ ಯುಗದ ಕೊಡುಗೆ ವೈಚಾರಿಕತೆ ವೈಚಾರಿಕತೆಯ ತಂದೆ ತಾಯಿ ಗುರು ಎಲ್ಲವೂ ಅವನ ಮತಿ, ಮಾನವನ ಸರ್ವೋತ್ಕೃಷ್ಟವಾದ ಆಯುಧ ಮತಿಯೇ ಕತ್ತಲಲ್ಲಿ ದಾರಿ ತೋರುವ ಕೈದೀವಿಗೆ ಮತೀಯ ದೆಸೆಯಿಂದಲೇ ಪ್ರಾಣಿ ಮಾತ್ರವಾಗುತ್ತಿದ್ದ ನರ ಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ ಮತೀಯ ಕೃಪಾ ಮಹಿಮೆಯಿಂದಲೇ ನಾವು ಮನುಷ್ಯತ್ವದಿಂದ ದೈವತ್ವಕ್ಕೆ ಏರಬೇಕಾಗಿ

ಮನೋ ವಿಚಾರದಿಂದ ಲುಪ್ತವಾಗಿ ವಿಶೇಷ ಜ್ಞಾನ ಹಾಗೂ ಸ್ವಾನುಭವಗಳ ಹಿನ್ನೆಲೆಯಲ್ಲಿ ನಡೆಯುವ ಆಲೋಚನೆ ತರ್ಕ ಮತ್ತು ವಿಶ್ಲೇಷಣೆ ವೈಚಾರಿಕತೆ ಎನಿಸಿಕೊಳ್ಳುತ್ತದೆ. ವೀಕ್ಷಣೆ ಮತ್ತು ವಿಶ್ಲೇಷಣೆ ಪ್ರಯೋಗಗಳ ಮೂಲಕ ಹರಿದು ಬಂದ ಕ್ರಿಯೆಯೇ ವೈಜ್ಞಾನಿಕ ದೃಷ್ಟಿಯಾಗುತ್ತದೆ ಇವೆರಡಕ್ಕೂ ಮತಿಯೇ ಮೂಲ. ಪ್ರಶ್ನೆಗಳೇ ಶೋಧನಾ ಮಾರ್ಗ, ಸತ್ಯ ಸಾಕ್ಷಾತ್ಕಾರವೇ ಅದರ ಫಲ ವೈಚಾರಿಕ ಬುದ್ಧಿ ಮತ್ತು ವೈಜ್ಞಾನಿಕ ದೃಷ್ಟಿಗಳೆರಡು ಪರಸ್ಪರ ಪೂರಕಗಳು” ಎಂದಿದ್ದಾರೆ. ಇನ್ನು ಮುಂದುವರೆದು ನೋಡುವುದಾದರೆ “ವೈಚಾರಿಕತೆ ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿ ಬೇಕೆಂದೇನೂ ಇಲ್ಲ ಏಕೆಂದರೆ ಭಾವೋದ್ರೇಕದಿಂದ ವಿಮುಕ್ತಗೊಂಡು ಶುದ್ಧ ತಾರ್ಕಿಕ ಮತ್ತು ವಿಚಿಕಿತ್ಸಕ ದೃಷ್ಟಿಯಿಂದ ವಸ್ತುಸ್ವರೂಪವನ್ನು ಅರಿತುಕೊಂಡು ಸದ್ಯ ವಿವೇಕದಿಂದ ಜೀವನ ಮೌಲ್ಯವನ್ನು ನಿಭಾಯಿಸಬಲ್ಲ ವಿವೇಕ ಸಾಮರ್ಥ್ಯವೇ ವೈಚಾರಿಕತೆ”[೨] ಎಂದು ದೇಜಗೌರವರು ಹೇಳುತ್ತಾರೆ.

ಸಾ.ಶಿ.ಮರುಳಯ್ಯನವರ ಬರಹಗಳು ವಿಚಾರ ಯೋಗ್ಯವೂ ಆದ ಬದುಕು ಕಂಡ ಕನಸು ಉಂಡ ಸಿಹಿಗಳು ಆ ಮೂಲಕ ರೂಢಿಸಿಕೊಂಡ ಜೀವನ ದೃಷ್ಟಿಯ ಅಧ್ಯಯನದಲ್ಲಿ ಮುಖ್ಯವಾಗುತ್ತದೆ. ಅವುಗಳಿಗೆ ಹೊಂದಿಕೊಂಡಂತೆ ಇಡಿಯಾಗಿ ಬಿಡಿಯಾಗಿ ಪ್ರಕಟವಾಗಿರುವ ಅವರ ವಿಚಾರ ಅವರ ಸಮಾಜ ಪ್ರಜ್ಞೆ ಮತ್ತು ನಿಷ್ಠುರ ಜೀವನ ದೃಷ್ಟಿಗೆ ನಿದರ್ಶನವಾದುದಾಗಿದೆ. ವಿಚಾರ ಎಲ್ಲಿಂದಲೋ ಹುಡುಕಿ ಕಡ ತರುವಂಥದ್ದಲ್ಲ ಇಲ್ಲಿನ ನಮ್ಮ ಸಮಸ್ಯೆಗಳಿಗೆ ನಾವೇ ಖುದ್ದಾಗಿ ಪರಿಹಾರಹುಡುಕಬೇಕಾದ ಎಲ್ಲವನ್ನೂ ಪಕ್ಷಪಾತವಿಲ್ಲದೆ ತೂಗಿ ನೋಡುವವನಿಗೆ ಜೀವನದಲ್ಲಿ ಹೇಗೆ ಸಾಗಬೇಕೆಂದು ಅರಿವಾಗುತ್ತದೆ.

“ಅಧಿಕಾರ ಬೇಡ, ಸಿರಿಹೊನ್ನು ಬೇಡ ಬೇಡೆನಗೆ ಆವ ಪದವಿ!
ನೇಹಿಗರು ಬೇಡ, ಬೇಹಿಗರು ಬೇಡ, ಸುರನಾರಿಯಟ್ಟು ಅಡವಿ!
ಅರಮನೆಯು ಬೇಡ, ಗುರುಮನೆಯು ಬೇಡ, ಕೈವಲ್ಯ ಬೇಡ ಕಡೆಗೆ!
ಅವಳಿದ್ದರಾಯ್ತು ಒಲವೊಂದೆ ಸಾಕು ಚೆಲುವುಣಿಸೆ ಮುಕ್ತಿ ನನಗೆ!”[೩]

ಇಲ್ಲಿ ಪ್ರೀತಿಯ ವಿಶ್ವ ದರ್ಶನವೇ ಆಗಿರುವುದು ಈ ಕವನದಲ್ಲಿ ಪ್ರೀತಿಗೆ ಇಷ್ಟೊಂದು ಅಗಾಧ ಶಕ್ತಿ ಇದೆಯಲ್ಲ ಎಂದೆನಿಸದಿರುವುದು ಜಾತಿ, ಧರ್ಮ, ಧನಿಕ, ಶ್ರೀಮಂತ ಇವುಗಳ ನಡುವಿನ ಅಂತರಗಳು ಹೋಗಬೇಕೆಂದು ಅದನ್ನು ಸಾಧಿಸುವ ಸಾಧನ ಪ್ರೀತಿ ಎಂದು ಸಾರಿ ಹೇಳುವುದು ಇಲ್ಲಿನ ಮುಖ್ಯ ಆಶಯವಾಗಿದೆ.

ಧರ್ಮ ಪರವಾದ ವೈಚಾರಿಕ ವಿಚಾರಗಳನ್ನು ಅಮಾನುಷವಾದ ಸಂಪ್ರದಾಯಗಳನ್ನು ವಿಚಾರದ ಹಿನ್ನಲೆಯಲ್ಲಿ ಸಮಗ್ರವಾಗಿ ವಿವೇಚನೆ ಮಾಡುವುದು ಅನಿವಾರ್ಯವಾಗಿದೆ. ವಿಚಾರ ಕ್ರಾಂತಿಗೆ ಮುಂದಾಗಬೇಕಾದ ಯುವಕರು ಸಹ ಮಹಿಳೆಯರ ಪರವಾಗಿ ಸಹಾನೂಭೂತಿ ಕಳಕಳಿ ಅತಿರೇಕದ ಗೌರವದ ಮಾತುಗಳನ್ನಾಡದೆ ಅವರ ವ್ಯಕ್ತಿತ್ವಕ್ಕೆ ತಕ್ಕ ಬೆಲೆಯನ್ನು ನೀಡಬೇಕು. ಅವರ ವೈಚಾರಿಕತೆಗೆ ಮನ್ನಣೆ ನೀಡಬೇಕು, ಹಾಗಾದರೆ ಮಾತ್ರ ಮಹಿಳೆಯರು ವಿಚಾರವಂತರಾಗುತ್ತಾರೆ. ಸ್ವಾತಂತ್ರ್ಯ ಮನ ಪ್ರವೃತ್ತಿ ಮಾತ್ರ ಉನ್ನತವಾದ ವೈಚಾರಿಕ ಧೋರಣೆಯನ್ನು ತಳೆಯುತ್ತದೆ.

“ಏಳಿ ಎಚ್ಚರಗೊಳ್ಳಿ ಕೆಚ್ಚೆದೆಯ ಕಲಿಗಳೇ
ನೆತ್ತರೋಕುಳಿಯಲ್ಲಿ ನಾಟ್ಯವಾಡೆ
ತಾಯೆದೆಯ ರಂಗದಲಿ ಬಾಳ ನೆತ್ತವನಾಡಿ
ಹಗೆಯ ತಲೆ ನೆಗ್ಗೊತ್ತಿ ಮೆಟ್ಟಲಿಂದೇ”[೪]

ಆದ್ದರಿಂದ ನಾವೆಲ್ಲ ನಮ್ಮ ಸಮಾಜದ ಆರೋಗ್ಯಕರ ವಿಕಾಸಕ್ಕೆ ಭಂಗ ಬಾರದ ರೀತಿಯಲ್ಲಿ ರಚನಾತ್ಮಕವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾದ ಬೇಕಾದ ಅಗತ್ಯ ಇನ್ನೂ ಉಳಿದಿದೆ.

ಅತಿ ಸಂತಾನವನ್ನು ತಡೆಗಟ್ಟಲು ಮಹಿಳೆಯರಿಗೆ ಸರಿಯಾಗಿ ಮಾರ್ಗದರ್ಶನ ನೀಡಬೇಕು. ನಮ್ಮಲ್ಲಿ ತಾಯ್ತನ ಎಂಬುದು ಮಹಿಳೆ ಆಯ್ಕೆಯಾಗಿಲ್ಲ. ಅವಳಿಗೆ ಇಷ್ಟವಿರಲಿ ಇಲ್ಲದಿರಲಿ ಆಕೆ ತಾಯಿ ಆಗಲೇಬೇಕು. ತಾಯಿಯಾದ ಮೇಲೆ ಅವಳಿಗೆ ವಿಶೇಷವಾದ ಮಾರ್ಗದರ್ಶನ ಬೇಕಾಗುತ್ತದೆ. ಕೂಡಿ ಬಾಳಿದರೆ ಸ್ವರ್ಗ ಸುಖ ಎಂಬಂತೆ,

“ಹೆಣ್ಣು ಹಡೆಯಲು ಬೇಕು
ಗಂಡು ದುಡಿಯಲು ಬೇಕು
ಕೂಡಿಬಾಳುವ ಪಾಠ ಕಲಿಯಬೇಕು
ಮೇಲು ಕೀಲುಗಳಿಲ್ಲ
ಪಕ್ಷಪಾತವು ಸಲ್ಲ
ದಾಂಪತ್ಯ ಜೀವನವೆ ಬೇವು-ಬೆಲ್ಲ”[೫]

ಒಂದು ಮಗುವಿನಿಂದ ಮತ್ತೊಂದು ಮಗುವಿಗೆ ಅಂತರವಿರಬೇಕು ಯಾವ ಹರದಿ ಯಾವ ಅವಧಿಯಲ್ಲಿ ಸಂತಾನ ಹರಣ ಚಿಕಿತ್ಸೆ ಮಾಡಿಸಬೇಕು, ಎಂಬುದರ ಬಗೆಗೆ ಅರಿವು ನೀಡಬೇಕು ಬಹಳಷ್ಟು ಪುರುಷರು ಮಹಿಳೆಯರನ್ನು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವಂತೆ ಪ್ರೇರೇಪಿಸುತ್ತಾರೆ. ಕುಟುಂಬ ಯೋಜನೆಯ ಜವಾಬ್ದಾರಿಯೂ ಆಕೆಗೆ ವಹಿಸಿರುತ್ತಾರೆ ಇಂತಹ ಪ್ರಯೋಗಗಳಿಗೆ ಗರ್ಭಾಶಯವು ಏಕೈಕ ಸಾಧನವಾಗಿರುವುದು ಹೆಣ್ಣಿನ ದುರಂತ ತಾಯ್ತನವನ್ನು ಒಂದು ಮೌಲ್ಯವಾಗಿ ಪ್ರತಿಪಾದಿಸುವ ಸಮಾಜದಲ್ಲಿ ಅದರ ನಿರಾಕರಣೆ ಊಹೆಗೂ ನಿಲುಕದ್ದು, ಇಂತಹ ಸಂದರ್ಭದಲ್ಲಿ ಮಿತ ಸಂಸಾರದ ಮಹತ್ವವನ್ನು ತಿಳಿ ಹೇಳಿ ಅತಿ ಸಂತಾನವನ್ನು ತಡೆಗಟ್ಟಬೇಕು ಎಂಬ ಅಂಶ ಈ ಕವನದಲ್ಲಿ ವ್ಯಕ್ತವಾಗಿದೆ.

“ಹಸೆಮಣೆಯ ಹೊಸ ಹಾಡು ಸೊಸೆಯರಿರ ಕೇಳಿ
ಎರಡೆ ಹಸುಗೂಸಿರಲಿ ಎಚ್ಚರದಿ ಬಾಳಿ ॥
ಬೆಚ್ಚನಾ ಮನಯಿರಲಿ ವೆಚ್ಚಕ್ಕೆ ಹೊನ್ನಿರಲಿ
ಇಚ್ಚೆಯರಿತಾ ಮಡದಿ ಇದ್ದರೂ ಕೇಳಿ
ಸಗ್ಗಕ್ಕೆ ಕಿಚ್ಚಿಡಲು ಸಾಧ್ಯವಿಲ್ಲ
ಮಕ್ಕಳಿಬ್ಬರೆ ಇರಲು ಮಂಗಳವು ಎಲ್ಲ!
ಆರತಿಗೆ ಅರಳೊಂದು ಕೀರುತಿಗೆ ಕುಡಿಯೊಂದು
ಮಾನವತೆಗಿಹುದಿದುವೆ ಮಂದಾರ ನೋಡು
ಹಳ್ಳಿದಿಳ್ಳಿಯ ಬೆಳೆದು ಬಳ್ಳದಲಿ ಹೊನ್ನಳೆದು
ಒಳ್ಳಿತಾಗಲು ಇಂದು ಸಾಕು ಎರಡು!”[೬]

ಈಗಾಗಲೇ ಇರುವ ಜನಸಂಖ್ಯೆ ತಲುಪಬಹುದಾದ ಅಂಕಿ ಅಂಶಗಳು ಆತಂಕಕ್ಕೀಡು ಮಾಡುತ್ತವೆ ಸಮಾಜದಲ್ಲಿ ಮನೆ ಮಾಡಿರುವ ಮೌಢ್ಯ ಧರ್ಮಾಂಧತೆ ಕೀಳರಿಮೆ ಮುಂತಾವುಗಳಿಗೆ ಅವೈಚಾರಿಕತೆಯೇ ಮುಖ್ಯ ಕಾರಣವಾಗಿದೆ

“ಅಹುದಹುದು ಮಲ್ಲಿಗೆಯೆ ನನ್ನೆದೆಯ ನಂದನವೆ
ಧಾತು ಈಶ್ವರ ಬರದ ಇತಿಹಾಸವು!
ಇಂದಿನನುಕೂಲಗಳು ಅಂದೆಲ್ಲಿ ಬರಬೇಕು
ಮೌಢ್ಯ ಮನೆ ಮಾಡಿರಲು, ಇಲ್ಲ ಅರಿವು”[೭]

ಪರಂಪರೆಯಿಂದ ಮಡುಗಟ್ಟಿ ನಿಂತಿರುವ ಅಲಂಕರಣ ವ್ಯಾಮೋಹ, ಅಂಧಶ್ರದ್ಧೆ, ಧರ್ಮಧುರೀಣ ಮುಂತಾದ ವಿಷಯಗಳ ಬಗ್ಗೆ ವಸ್ತುನಿಷ್ಠವಾಗಿ ಆಲೋಚಿಸುವ ಶಕ್ತಿಯನ್ನು ಪ್ರಚೋದಿಸುತ್ತಿದ್ದ ಶ್ರೇಷ್ಠವಾದ ಮನೋವೈಜ್ಞಾನಿಕವಲ್ಲದ ದಮನ, ವೈಚಾರಿಕ ದಾರಿದ್ರವನ್ನು ಹೋಗಲಾಡಿಸುವಲ್ಲಿ ಪೂರ್ಣ ಸಫಲವಾಗಿಲ್ಲ.

"ಜೀವನದಲ್ಲಿ ಲೋಕಾನುಭವ ಗಳಿಸುವ ದೇಶ ಸುತ್ತು ಕೋಶ ಓದು ಎಂಬ ಮಾತಿಗೆ ನಾಲ್ಕು ಗೋಡೆಗಳಿಗೆ ಸೀಮಿತವಾದ ಮಹಿಳೆಗೆ ದೇಶ ಸುತ್ತದ ಕೋಶವಾದರೆ ಲೋಕಾನುಭವ ಬರುವುದು ಎಲ್ಲಿಂದ? ಶಿಕ್ಷಣ ವಂಚಿತರಾದವರಿಂದ ಎಷ್ಟರ ಮಟ್ಟಿಗೆ ವೈಚಾರಿಕತೆಯನ್ನು ನಿರೀಕ್ಷಿಸಲು ಸಾಧ್ಯ? ದೇಶದ ಜೀವಾಳವೇ ಸ್ತ್ರೀಯರು ಜಗತ್ತಿನ ಎಲ್ಲೂ ಇಂತಹ ಸರಳ ಹೃದಯದ ಮಮತೆಯ ಮೂರ್ತಿಗಳನ್ನು ಕಾಣಲು ಸಾಧ್ಯವಿಲ್ಲ ಆದರೆ ಅವರು ಸ್ವತಂತ್ರವಾಗಿ ವಿಚಾರ ಮಾಡುವ ಸಾಮರ್ಥ್ಯ ಗಳಿಸದೇ ಹೋದರೆ ನಾಳಿನ ದಿನ ಅವರಿಗೆ ಉಳಿಗಾಲ ಇಲ್ಲ"[೮] ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ.

"ಮಿತಿಯು ಬೇಕು ಸನ್ಮತಿಯ ಬೇಕು ಸಂಸಾರ ನಡೆಯುವಲ್ಲಿ  
ಹತ್ತು ಮಕ್ಕಳಿನ ಕುತ್ತು ಸಾಕು ಸುಖ ಬೇಕು ಎನ್ನುವಲ್ಲಿ  
ಗೊನೆಯೊಂದೆ ನೋಡು ರಸಬಾಳೆ ಗಿಡಕೆ ನೂರಿಲ್ಲ ತಂಟೆ ತಳ್ಳಿ  
ಸಾಕೊಂದೆ ಎರಡು ಬೇಕಾದರಿರಲಿ ಬೆಳೆಹಂಬು ಕುಲದ ಬಳ್ಳಿ!  
ತೊಟ್ಟೋಲೆತ್ತಿ ತೂಗುತ್ತ ಕುಳಿತ ಕೈಗಿಲ್ಲ ಒಂದೆ ಬದುಕು  
ಅತ್ತಾಗ ತೆರೆವ ಜೋಗುಳದ ಬಾಯ್ಗೆ ಬರಿ ಹಾಡೆ ಅಲ್ಲ ಪಲುಕು  
ಬಾಳಿನೆಳೆಯ ಹಾಸಿಕ್ಕಿ ಬೀಸಿ ಹೊಸ ವಸ್ತ್ರ ನೇಯಬೇಕು  
ಆದಾಯದಲ್ಲಿ ಉಳಿತಾಯ ಮಾಡಿ ಸಂಚಯಿಸಬೇಕು ಸರಕು!"[೯]

ಪತಿಯೂ ಪತ್ನಿಯನ್ನು ಸನ್ಮಾನಿಸಬೇಕು ಗೌರವಿಸಬೇಕು ಅವಳ ಜತೆ ವಿನಯದಿಂದ ವರ್ತಿಸಬೇಕು ಅವಳ ವಿಶ್ವಾಸವನ್ನು ಗಳಿಸಬೇಕು ಮನೆಯ ಕಾರ್ಯ ಕಲಾಪಗಳಲ್ಲಿ ಜವಾಬ್ದಾರಿಯನ್ನು ವಹಿಸಬೇಕು ಅವಳಿಗೆ ಆಭರಣಗಳನ್ನು ಕೊಡಿಸಬೇಕು ಅದಕ್ಕೆ ಬದಲಾಗಿ ಪತ್ನಿಯ ಮೇಲೆ ಪ್ರೇಮದ ಮಳೆ ಸುರಿಸಬೇಕು ಗೃಹ ಕೃತ್ಯಗಳನ್ನು ಜವಾಬ್ದಾರಿಯಿಂದ ನಿಭಾಹಿಸಿಕೊಂಡು ಹೋಗಬೇಕು ತನ್ನ ತಂದೆ ತಾಯಿ ಅತ್ತೆ ಮಾವ ಮತ್ತು ಉಳಿದ ಸಂಬಂಧಿಕರನ್ನು ಯೋಗ್ಯ ರೀತಿಯಲ್ಲಿ ಆಧರಿಸಿ ಸತ್ಕರಿಸಬೇಕು ತನ್ನ ಸಚ್ಚಾರಿತ್ರ್ಯದಿಂದ ಅವನ ವಿಶ್ವಾಸವನ್ನು ಗಳಿಸಬೇಕು, ಅವನು ತಂದಂತಹ ಸಂಪತ್ತನ್ನು ಮತ್ತು ಆದಾಯವನ್ನು ಜಾಗರೂಕತೆಯಿಂದ ಹಾಳಾಗದಂತೆ ಉಪಯೋಗಿಸಬೇಕು ಎನ್ನುವಲ್ಲಿ ಗಂಡಹೆಂಡತಿಯರ ಕೂಡಿಬಾಳುವ ಜೀವನವೇ ಮಹತ್ವದ್ದು ಎಂಬ ಅಂಶವನ್ನ ನಾವು ಈ ಕವನದಲ್ಲಿ ಗಮನಿಸಬಹುದು.

"ಚಿಕ್ಕದಾದ ಸಂಸಾರದಲ್ಲಿ ತುಂಬಿಹುದು ಸಗ್ಗ ಸಾರ  
ಅಕ್ಕರೆಯ ಅಣುಗರೊಕ್ಕಲಿಗೆ ಬೇಕು ಚುಕ್ಕಾಣಿ ಶುಕ್ರತಾರ!  
ಎರಡು ಬೇಕು, ಮೂರಿರಲು ಸಾಕು, ಹೆಚ್ಚಿದರೆ–ತಲೆಗೆ ಭಾರ  
ಎಚ್ಚರವು ಬೇಕೆ? ಕೆಚ್ಚಿರಲು ಸಾಕೆ? ಸಂಯಮವು ಬೇಕೊ ಧೀರ!"[೧೦]

ಇದು ಭಾರತೀಯ ಹೆಣ್ಣು ಮಕ್ಕಳ ಮನೋಭಾವ ಕನ್ನಿ ಇದ್ದಾಗ ಮದುವೆ ಚಿಂತೆ ಮದುವೆಯಾದ ಮೇಲೆ ಮಕ್ಕಳ ಚಿಂತೆ! ಹೆಣ್ಣಾಗಿ ತಿಂದರೆ, ಗಂಡು ಮಗು ಬೇಕೆಂಬ ಚಿಂತೆ! ಈ ಚಿಂತೆಗಳೇ ನಮ್ಮ ಇಂದಿನ ಜನಸಂಖ್ಯೆ ಬೆಳವಣಿಗೆಗೆ ಕಾರಣವಾಗಿದೆ. ಭಾರತೀಯರಲ್ಲಿ ಮದುವೆಯ ಉದ್ದೇಶ ಲೈಂಗಿಕ ತೃಪ್ತಿಗಿಂತ ಮಿಗಿಲಾಗಿ ಸಂತಾನ ಮುಂದುವರಿಕೆಯಾಗಿದೆ.

ಜಿಎಸ್ಎಸ್ ಅವರು "ವಿಮರ್ಶೆಯ ಪರಿಕಲ್ಪನೆಗಳಿಂದಲೇ ಪ್ರಾಚೀನ ಮತ್ತು ಆಧುನಿಕ ಸಾಹಿತ್ಯಕ್ಕೆ ವೈಚಾರಿಕತೆಯ ವ್ಯಾಖ್ಯಾನ ಮಾಡುತ್ತಾರೆ ಪರಂಪರೆ ಸಂಪ್ರದಾಯ ಪ್ರಗತಿ ಪುನರ್ಜೀವನ ಚಳುವಳಿ ಸಮಕಾಲೀನ ಪ್ರಜ್ಞೆ ಯುಗಧರ್ಮ ಮನೋಧರ್ಮ ಮುಂತಾದ ಪದಗಳನ್ನೇ ಪರಿಶೀಲಿಸಿದರೆ ಸ್ಪಷ್ಟವಾಗುತ್ತದೆ ವೈಚಾರಿಕತೆ ಈ ಎಲ್ಲ ಪರಿಕಲ್ಪನೆಗಳ ಅರ್ಥವನ್ನು ಒಳಗೊಂಡು ವಿಮರ್ಶೆಯೇ ವೈಚಾರಿಕತೆ ಎಂಬ ಅರ್ಥ ಧ್ವನಿಸುತ್ತದೆ ಇಲ್ಲಿ ಮುಖ್ಯವಾಗಿ ಜಿಎಸ್ಎಸ್ ವೈಚಾರಿಕತೆಯನ್ನು ಸಾಮಾಜಿಕ ಪ್ರಜ್ಞೆ ಎನ್ನುತ್ತಾರೆ. ಪ್ರಜ್ಞೆ ಎಂದರೆ ಯಾವುದೇ ವಸ್ತು ಸತ್ಯವನ್ನು ತನ್ನ ಪ್ರತಿಭಾನದಿಂದ ಗ್ರಹಿಸಿ ಪರಿಭಾವಿಸುವ ಒಂದು ವಿಶೇಷ ಸಂವೇದನೆ ಎಂದು ಅರ್ಥ ಕವಿಯಾದವನು ಈ ಪ್ರಜ್ಞೆಯಿಂದ ತನ್ನ ಸುತ್ತಣ ಸಮಾಜದ ಆಶೋತ್ತರಗಳನ್ನು ತುಡಿತ ಮಿಡಿತಗಳನ್ನು ಮೌಲ್ಯಗಳನ್ನು ಒಳಹೊಕ್ಕು ಕಂಡು ತನ್ನ ಕೃತಿಯಲ್ಲಿ ಕಲಾತ್ಮಕವಾಗಿ ಅಭಿವ್ಯಕ್ತಿ ಪಡಿಸುತ್ತಾನೆ."[೧೧]

ಸಾಶಿಮ ಅವರ ವೈಚಾರಿಕತೆ ಕೇವಲ ಸಾಂಸ್ಕೃತಿಕ ಕ್ಷೇತ್ರಕ್ಕೆ ಸೀಮಿತವಾಗಿರದೆ ಆರ್ಥಿಕ ಕ್ಷೇತ್ರಕ್ಕೂ ತನ್ನ ಕ್ರಾಂತಿಯ ಕಿಡಿಗಳನ್ನು ಹರಿಸಿದೆ. ಕೃಷಿ ನಮ್ಮ ದೇಶದ ಬೆನ್ನೆಲುಬು ಎಂಬ ಮಾತು ಕೇವಲ ಒಂದು ಹೇಳಿಕೆಯಲ್ಲ ಇದು ಜೀವಂತ ಸತ್ಯ.ಗೀತೆಯ ಸಾರವನ್ನು ಅರಿತವನು ರೈತನೊಬ್ಬನೇ ಅನ್ನಿಸುವುದು ಏಕೆಂದರೆ ಕರ್ಮವೇ ಇಹಪರ ಸಾಧನೆ ಎಂಬ ತತ್ವವನ್ನು ಮೊದಲು ಅರಿತವನು ಈ ರೈತ ಇಂತಹ ಕರ್ಮಯೋಗಿಗೆ ಪ್ರತಿನಿಧಿಯಾಗಿದ್ದಾರೆ ಸಾಶಿಮ ರವರು ರೈತರೊಂದಿಗೆ ಹೊಂದಿದ್ದ ಒಡನಾಟದಿಂದಾಗಿ ಅವರ ಬದುಕು ಬವಣೆಯನ್ನು ಚಿತ್ರಿಸಿದ್ದಾರೆ.

"ಬಂದಿದೆ ಯುವಕನೆ ಇದೊ, ಆಹ್ವಾನ!  
ಬೇಡುವುದಿಲ್ಲವೊ ಅದು ಬಲಿದಾನ!  
ದುಡಿಮೆಯೆ ದೇವರು ಜಡತೆಯದೇಕೆ?  
ಸ್ವಾ–ವಲಂಬನವೆ ಸಗ್ಗವೊ ಮಂಕೆ!"[೧೨]

ಯುವಜನತೆಗೆ ಎಚ್ಚರಿಕೆಯ ಕರೆಗಂಟೆಯಾಗಿದ್ದು ಮುಂದಿನ ಪೀಳಿಗೆಗೆ ಸಂದೇಶವನ್ನು ತಲುಪಿಸುವ ಆಶಯವನ್ನು ಈ ಪದ್ಯದಲ್ಲಿ ನಾವು ಗಮನಿಸಬಹುದು.

"ಮುಂಜಾವು ಮೇಲೆದ್ದು ಮನೆ ಮುಂದ ಮುದಗೊಳಿಸಿ  
ಚಂದಬಂಗಾರವನು ಬರೆವರಿಲ್ಲ  
ಮೊಗದೊಳೆದು ಹಣೆಗಿಟ್ಟು ಮುಮುದಲೆಯ ನೇರಿಸುವ  
ಅಂದದಾ ಮುತ್ತೈದೆ ಕಾಣುತಿಲ್ಲ  
ನೊಗ ಹಗ್ಗ ಪಟಗಣ್ಣಿ ನೇಗಿಲುಗಳೆತ್ತಿಕ್ಕಿ  
ಎತ್ತುಗಳ ತೂರಿಸುವ ಗೌಡನಿಲ್ಲ  
ಬೀಸುಗಲ್ಲಿನ ಮುಂದೆ ತಾಂಬೂಲವನ್ನು ಸವಿವ  
ಅಂಗನೆಯರಾ ಹಾಡು ಕೇಳುತಿಲ್ಲ"[೧೩]

ಜಾಗತೀಕರಣದಿಂದ ಬದಲಾದ ಸಮಾಜದ ದುಸ್ಥಿತಿಯ ಒಕ್ಕಲುತನವನ್ನು ಮಾರಿಯನ್ನಾಗಿಸಿತು ಎಂಬುದನ್ನು ನಾವಿಲ್ಲಿ ಗಮನಿಸಬಹುದು.

"ಮಥಿಸಿದರೆ ಹುಟ್ಟುವುದು ಬೆಂಕಿ ಕಟ್ಟಿಗೆಯಿಂದ  
ತೋಡಿದರೆ ಪುಟಿಯುವುದು ನೀರು ನೆಲದಿಂದ

ಸಾಹಸಿಗಸಾಧ್ಯವೆಂಬುದೇ ಇಲ್ಲ
ಸನ್ಮಾರ್ಗದಲಿ ಗಮಿಸೆ ಫಲಿಸುವುದು ಎಲ್ಲ"[೧೪]

ಇಲ್ಲಿ ರೈತನ ಹಿರಿಮೆ ಎಂಥದ್ದೆಂದು ವ್ಯಕ್ತವಾಗುತ್ತದೆ ಗಾಂಧಿ ಅಥವಾ ನೆಹರು ಒಬ್ಬೊಬ್ಬ ವ್ಯಕ್ತಿಯಲ್ಲ ರಾಷ್ಟ್ರ ನಿರ್ಮಾಪಕರನ್ನು ರಾಜಕಾರಣಿಗಳನ್ನು ಪ್ರತಿನಿಧಿಸುವ ಸಾಮೂಹಿಕ ಶಕ್ತಿಯ ಸಂಕೇತಗಳು. ಆ ಶಕ್ತಿಗಿಂತಲೂ ರೈತ ಶಕ್ತಿ ಮಿಗಿಲಾದದ್ದು ಎನ್ನುತ್ತಾರೆ ಸಾಶಿ ಮರುಳಯ್ಯನವರು ರೈತ ಸ್ಥಿತಪ್ರಜ್ಞ ನಿಜ ಕಷ್ಟ-ಸುಖವೋ ಹಸಿವು-ದಾಹವೋ ಅವನು ನಿತ್ಯ ಅತೃಪ್ತ ನೆರೆಯವ ಎಳೆನೀರಿನಲ್ಲಿ ಕೈ ಕಾಲು ಮುಖ ತೊಳೆದು ಅಮೃತ ಆಹಾರವನ್ನು ತಿನ್ನುತ್ತಿದ್ದರು. ಆದ್ದರಿಂದಲೇ ಭಾರತ ಖಂಡದಲ್ಲಿ ಕ್ರಾಂತಿ ಸಾಧ್ಯವಾಗಲಿಲ್ಲ ಅವನ ಸಹಕಾರವಿಲ್ಲದೆ ಕ್ರಾಂತಿ ಸಾಧಿಸುವ ಕಾರ್ಯ ಬ್ರಹ್ಮನಿಗೂ ಎಟುಕುತ್ತಿಲ್ಲ ಆ ಕಾರಣಕ್ಕಾಗಿಯೇ ಆಳುವ ಜನ ಹಿಂದಿನಿಂದ ಅವನನ್ನು ನಿರ್ಲಕ್ಷಿಸುತ್ತಾ ಬಂದಿದ್ದಾರೆ ಪ್ರಜಾಪ್ರತಿನಿಧಿಗಳು ಸಹ ಸಾಮ್ರಾಟರಂತೆ ವರ್ತಿಸುತ್ತಿದ್ದಾರೆ.

"ಅನ್ನವೆ ಹಸಿದಿದೆ ಜಲ ಬಾಯಾರಿದೆ
ಭೂಮಿಯ ಬಯಸಿದೆ ಹಿಡಿಮಣ್ಣು
ತಲೆಯಿಲ್ಲದ ತಾನು ಮನವಿಲ್ಲದ ಎದೆ
ಶೂನ್ಯವ ಸೋಸಿದೆ ಬರಿಕಣ್ಣು!"[೧೫]

ಈ ಮಾತು ಇಂದಿನ ಪರಿಸ್ಥಿತಿಗೆ ಕನ್ನಡಿ ಹಿಡಿದಂತಿದೆ ಹೀಗಾಗಿ ರೈತ ತನ್ನ ಅಭ್ಯುದಯಕ್ಕಾಗಿ ತಾನೇ ಹೋರಾಟ ಮಾಡುತ್ತಿದ್ದಾನೆ. ಹಾಗೆ ಮಾಡುವುದೇ ಅವನಿಗೆ ಕ್ಷೇಮ ಯಾವ ಸರಕಾರ ಬಂದರೇನು? ಆದರೆ ರೈತರಿಗೆ ಒದಗಿರುವ ಸ್ಥಿತಿ ಎಂಥದ್ದು ಎಂದರೆ ಬೆಳೆಗಾರ ರೈತನ ಸಾವು ಆ ಸಾವಿಗೆ ಬೆಲೆ ಕಟ್ಟಿ ಇಂತಿಷ್ಟು ಪರಿಹಾರ.ಅವನ ಬವಣೆ ತಪ್ಪಿದಲ್ಲ ಎಷ್ಟೋ ರೈತರ ಆತ್ಮಹತ್ಯೆಗಳಿಂದ ಅವರ ಕುಟುಂಬದವರು ನರಕಯಾತನೆಯನ್ನು ಅನುಭವಿಸುತ್ತಿರುವುದು ದುರದೃಷ್ಟಕರವಾಗಿದೆ.

"ಏಕೆ ಇನಿತು ಮರುಗಿತಿರುವೆ?
ಅನ್ನಕಾಗಿ ಕೊರಗುತಿರುವೆ
ನಿನ್ನ ಅನ್ನ ನಿನಗೆ ಇಲ್ಲ
ಅಯ್ಯೊ ದೇವನೇ"[೧೬]

ರಾಷ್ಟ್ರಪ್ರೇಮಿ ಸಂಸ್ಕೃತ ಭೂಮಿಷ್ಠವಾಗಿದ್ದ ಈ ಕವಿಯ ಮಹತ್ವದ ಅಂಶ ಅನ್ನದಾತನಿಗೆ ಕವಿತೆಯಲ್ಲಿ ಕಾಣಬಹುದು.

ಇಡೀ ಜಗತ್ತಿಗೆ ಅನ್ನ ಕೊಡುವ ರೈತ ಇಂದು ಕಣ್ಣೀರಿನಲ್ಲಿ ಕೈ ತೊಳೆಯುವುದನ್ನು ಕಂಡು ಕನಿಕರ ಪಡುವ ಕವಿ ಅವನ ಬವಣೆಗಳನ್ನು ಚಿತ್ರಿಸುವ ವಸ್ತುನಿಷ್ಠ ಕವಿತೆಯನ್ನು ಬರೆದಿದ್ದಾರೆ. ಈ ಕವಿತೆ ಮಣ್ಣಿನ ಮಕ್ಕಳನ್ನು ಕುರಿತು ಬರೆದ ಮಾರ್ಮಿಕ ಬರಹವಾಗಿದೆ. ನೆಲದಾಯಿಯ ಚೊಚ್ಚಲ ಮಕ್ಕಳ ಕಷ್ಟ ಕಾರ್ಪಣ್ಯಗಳು ಎಷ್ಟೊಂದಿದೆ ಎಂದರೆ ಕವಿ ಪದ್ಯದ ಕೊನೆಗೆ ಪ್ರಶ್ನಾರ್ಥಕವಾಗಿ ಉದಾರ ಸೂಚಿಸುತ್ತಾನೆ. "ನಿನ್ನ ಏಳ್ಗೆ ಎಂದೋ ತಂದೆ? ನೋಡಲಾರೆನು"[೧೭] ಇಂಥ ಕಡೆ ಕವಿ ಸಾಶಿಮರವರು ಮಾನವೀಯತೆಯನ್ನೇ ಮೆರೆದಿದ್ದಾರೆ. ಎಂದು ದೊಡ್ಡರಂಗೇಗೌಡರು ಅಭಿಪ್ರಾಯಪಡುತ್ತಾರೆ.

ಕಲಿಯುಗದ ಮನುಕುಲಕ್ಕೆ ಕನ್ನಡಿ ಹಿಡಿದಂತಿದೆ ಈ ಮಾತು ಮನುಷ್ಯ ಮನುಷ್ಯನ ಬಗೆಗೆ ಇರಬೇಕಾದ ಪ್ರೀತಿ, ಸಹಾಯ, ಸಹಕಾರ ಮುಂತಾದ ಗುಣಗಳನ್ನೇ ಮರೆಯುತ್ತಿರುವ ಇಂದಿನ ದಿನಗಳಲ್ಲಿ ಇದೊಂದು ಜಾಗೃತಿ ಮೂಡಿಸುವ ಮನೆಮಾತಾಗಿದೆ.

"ಜೀತಪದ್ಧತಿ ಸತ್ತು ನೀತಿ ನೆಲೆ ನಿಂತಿಹುದು
ಸತ್ಯ ಸೂರ್ಯನ ತೇಜ ಬಿತ್ತರಿಸುತಿಹುದು
ಜೀತದಾಳಿಗು ಇಂದು ಸಮ ಆದಾಯ ಸಂದಿಹುದು
ಮಾನವೀಯತೆಯೊಂದೆ ಮರೆಯುತಿಹುದು"[೧೮]

ಭಾರತದಲ್ಲಿ ಎಲ್ಲ ವರ್ಗಗಳಲ್ಲಿ ಅನಕ್ಷರತೆ ಅಂಧಶ್ರದ್ಧೆ ಅನಗತ್ಯ ಆಡಂಬರ, ಅನುಕರಣೆ, ಅತಿ ಸಂತಾನ, ಮೌಢ್ಯ, ಭೋಗ, ಆಕಾಂಕ್ಷೆ, ಭ್ರಷ್ಟಾಚಾರ, ಧರ್ಮಾಂಧತೆ, ಕೀಳಿರಿಮೆ, ಅತಿಯಾದ ದೈವಭಕ್ತಿ, ಅವೈಜ್ಞಾನಿಕತೆ, ಸ್ವಜಾತಿ ಶೋಷಣೆ, ದುಂದುವೆಚ್ಚ, ದುಶ್ಚಟ, ಸಣ್ಣತನ ಮೊದಲಾದ ಸಮಸ್ಯೆಗಳು ವೈಚಾರಿಕತೆಗೆ ತೊಡಕಾಗಿವೆ ಇವೆಲ್ಲವುಗಳನ್ನು ಮೀರಿ ವೈಚಾರಿಕತೆಯನ್ನು ಮೆರೆಯಬೇಕು ಹಾಗಾದಾಗ ಮಾತ್ರ ಸಮಾಜದ ಸ್ವಾಸ್ಥ್ಯ, ಅದು ಮೂಲದಿಂದಲೇ ಬದಲಾಗಬೇಕು ಎಂಬುದನ್ನು ಕುರಿತು ಮುಕ್ತವಾಹಿನಿ ಕವನದಲ್ಲಿ ವ್ಯಕ್ತವಾಗಿದೆ.

"ಸರ್ವ ಸಾರ್ಥಕ್ಯವೂ ಸ್ವಾತಂತ್ರ್ಯವೇ!
ಇದನರಿತು ನುರಿತಿದ್ದರೂ,
ಮಾನವೀಯತೆಯ ಮಾರಣ ಹೋಮ,
ಆ ರೌದ್ರ ತಾಂಡವವ ನೋಡಿ,
ಕಂಗೆಟ್ಟ ಜನತೆ ನಿಂತಿದೆ ಇಲ್ಲಿ"[೧೯]

ಮೂಲ ಮಾನವನ ಭಯ ಮತ್ತು ವಿಸ್ಮಯ ದೇವರನ್ನು ಸೃಷ್ಟಿ ಮಾಡಿದ್ದವು ಎಂಬುದು ವೈಜ್ಞಾನಿಕವಾದ ಸಂಗತಿ ದೇವರ ಇರುವಿಕೆಯನ್ನು ನಂಬಿ ನೊಂದ ಮನಸ್ಸಿಗೆ ನೆಮ್ಮದಿಯನ್ನು ತಂದುಕೊಳ್ಳುವವರು ಇದ್ದಾರೆ ತಾವು ಮಾಡುವ ಸುಲಿಗೆಯ ಸಾಧನವಾಗಿ ಬಳಸಿಕೊಂಡವರು ಇನ್ನೂ ಹೆಚ್ಚು ಭಾರತದಂತಹ ಅಜ್ಞಾನ ಮತ್ತು ದಾರಿದ್ರ್ಯದ ದೇಶದಲ್ಲಿ ಬದಲಾವಣೆಯನ್ನು ತರಲು ದೊಡ್ಡ ಕಾಲ್ತೊಡಕುಗಳಿವೆ ಅವುಗಳಲ್ಲಿ ಆತ್ಮ ಪರಮಾತ್ಮ ಕರ್ಮ ಹಣೆಬರಹ ಪುನರ್ಜನ್ಮ ಮುಂತಾದವು.

ಎಲ್ಲಿ ಮೌಢ್ಯತೆಯೊ ಅಲ್ಲಿ ಆನಂದ, ಅಲ್ಲಿ ಜಾಣತನವೇ ಅಧಿಕವಾಗುತ್ತದೆ. ಸಾಮಾನ್ಯವಾಗಿ ಮನುಷ್ಯನು ಜೀವನದಲ್ಲಿ ಸಮಸ್ಯೆಗಳನ್ನು ಎದುರಿಸುವುದಕ್ಕಿಂತ ಹೆಚ್ಚಾಗಿ ಕನಿಷ್ಠ ಕಷ್ಟದ ಮಾರ್ಗವನ್ನು ಅನುಸರಿಸುತ್ತಾನೆ. ಆದುದರಿಂದ ವಿವೇಚನೆಗೆ ಬುದ್ಧಿಯಿಂದ ವ್ಯವಸ್ಥಿತ ಮಾರ್ಗದೊರೆಯುತ್ತದೆ.

**ಸಮಾಲೋಚನೆ**

ಒಟ್ಟಿನಲ್ಲಿ ಸಮಾಜಪರ ನಿಲವು-ಒಲವು ಪ್ರಸ್ತುತದಲ್ಲಿ ಅಗತ್ಯವಾಗಿದ್ದು, ಅಜ್ಞಾನ ಅನೀತಿ ಅಮಾನವೀಯ ಮೌಢ್ಯಗಳನ್ನು ಬುಡಮೇಲು ಮಾಡುವ ಮೂಲಕ ಇಂದು ಹೊಸಪೀಳಿಗೆಯ ನವವಸಂತಕ್ಕೆ ಚೇತನವನ್ನು ತುಂಬುವ ಕರ್ತವ್ಯನಮ್ಮೆಲ್ಲರದ್ದಾಗಿದೆ. ಮನುಷ್ಯನಿಗೆ ಮೂಲಭೂತ ಅಗತ್ಯಗಳು ಪಕ್ಷಪಾತವಿಲ್ಲದೆ ಸಿಗಬೇಕು ಎಲ್ಲರೂ ಸಮಾನತತ್ವದಿಂದ ಬಾಳಬೇಕು. ಅದು ಲೋಕಾನುಭವದಿಂದ ಜೀವಂತವಾಗಿರಬೇಕು, ಸಂಸ್ಕಾರಗೊಂಡಿರಬೇಕು, ಸಹೃದಯತೆಯಿರಬೇಕು ಅದೇ ಮಾರ್ಗದಲ್ಲಿ ವಿದ್ವಾಂಸರುಗಳ ವಿಚಾರದಿಂದ ಹೊಸದುಕೊಂಡು ಹೋಗಬೇಕಾಗುತ್ತದೆ. ಆಗ ಹೊಸ ಹೊಸ ವಿಚಾರಗಳನ್ನು ಹೆಕ್ಕಿ ತೆಗೆಯುವ ಮೂಲಕ ವೈಚಾರಿಕತೆಗೆ ಸ್ಪಷ್ಟ ನಿದರ್ಶನ ಒದಗಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


1. ಎಚ್.ಎಸ್ ರಾಘವೇಂದ್ರರಾವ್–೨೦೦೧, ಶತಮಾನದ ಸಾಹಿತ್ಯ ವಿಮರ್ಶೆ, ಕನ್ನಡ ಸಾಹಿತ್ಯ ಅಕಾಡೆಮಿ ಕನ್ನಡ ಭವನ, ಬೆಂಗಳೂರು.
2. ಜಿ.ಎಸ್ ಶಿವರುದ್ರಪ್ಪ (ಸಂ)–ವಿಚಾರ ಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಡಾ॥ ಎಚ್. ತಿಪ್ಪೇರುದ್ರಸ್ವಾಮಿ–೧೯೯೩, ಕುವೆಂಪು ಅವರ ವೈಚಾರಿಕತೆ, ಕನ್ನಡ ಸಾಹಿತ್ಯ ಅಧ್ಯಯನ ಸಂಸ್ಥೆ, ಮೈಸೂರು ವಿವಿ
4. ದೇಜಗೌ–ವಿಚಾರ ಕ್ರಾಂತಿಗೆ ಕುವೆಂಪು ಕರೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತುಮ, ಬೆಂಗಳೂರು.
5. ಪೂಜಾರ ಗದಿಗೆಮ್ಮ–೨೦೦೦, ತಿಪ್ಪೇರುದ್ರಸ್ವಾಮಿಗಳವರ ವಿಚಾರ ಸಾಹಿತ್ಯ, ಶರಣ ರಶ್ಮಿ ಪ್ರಕಾಶನ, ಗುಲ್ಬರ್ಗ.
6. ಮಹಾನಂದಾ ಡಿಗ್ಗಾಂವಕರ(ಸಂ)–೨೦೧೬, ನಾನು ನಾನಾಗಲು, ಸಾಶಿಮ ಆತ್ಮಕಥನ, ಸಾ.ಶಿ.ಮರುಳಯ್ಯ ಪ್ರತಿಷ್ಠಾನ ಬೆಂಗಳೂರು.
7. ಮಹಾನಂದಾ ಡಿಗ್ಗಾಂವಕರ(ಸಂ)–೨೦೧೬, ಸಾಶಿಮ ಕಾವ್ಯಸೌರಭ, ಸಾ.ಶಿ.ಮರುಳಯ್ಯ ಪ್ರತಿಷ್ಠಾನ ಬೆಂಗಳೂರು.
8. ವಾಗೀಶ ಎಂ.ಆರ್–೨೦೧೨, ಡಾ॥ ಸಾಶಿ ಮರುಳಯ್ಯ ನವರ ಸಮಗ್ರ ಸಾಹಿತ್ಯ ಒಂದು ಅಧ್ಯಯನ, ಮಧುರೈ ಕಾಮರಾಜ್ ವಿಶ್ವವಿದಾಲಯ, ಮಧುರೆ–೨೧.
9. ವೀರಮ್ಮ–೨೦೦೮, ಕನ್ನಡ ಮಹಿಳಾ ಸಾಹಿತ್ಯದಲ್ಲಿ ವೈಚಾರಿಕತೆ, ಕನ್ನಡ ವಿಶ್ವವಿದಾಲಯ, ಹಂಪಿ ಬಳ್ಳಾರಿ.
10. ವೈಬಿ ಹಿಮ್ಮಡಿ–೨೦೦೬,ಕನ್ನಡದಲ್ಲಿ ವೈಚಾರಿಕ ಸಾಹಿತ್ಯ ಒಂದು ಅಧ್ಯಯನ,ಕರ್ನಾಟಕ ವಿಶ್ವವಿದ್ಯಾಲಯ,ಧಾರವಾಡ.
11. ಸಾ.ಶಿ.ಮರುಳಯ್ಯ ೨೦೦೧, ಸಾಶಿಮ ಸಮಗ್ರಕಾವ್ಯ, ಸ್ವಪ್ನ ಬುಕ್‌ಹೌಸ್ ಬೆಂಗಳೂರು.